## ಇಲ್ಲಿಯವರೆಗೆ

ಜಾನ್–ದಮಯಂತಿ ಅಮೆರಿಕದಿಂದ ಬಂದು 15 ದಿನಗಳ ಕಾಲ ತಂಗುತ್ತಾರೆ. ಇಲ್ಲಿ ಮೈಸೂರು, ಊಟಿ. ಗೋವಾ ಎಂದೆಲ್ಲ ಸುತ್ತಿದ ಮೇಲೆ ಅಮೆರಿಕಕ್ಕೆ ವಾಪಸಾಗುತ್ತಾರೆ. ಇವರಿಬ್ಬರ ನಡವಳಿಕೆ ಸಾವಿತ್ರಿ–ಕೃಷ್ಣರಿಗೆ ವಿಚಿತ್ರವೆನಿಸುತ್ತದೆ. ಆದರೂ ಏನೊಂದೂ ಮಾತನಾಡುವುದಿಲ್ಲ. ಇದು ನಮ್ಮ ತಲೆಮಾರುಗಳು ಸಾಗುತ್ತಿರುವ ದಾರಿ ಎಂದುಕೊಂಡರು. ಮುಂದಿನ ತಲೆಮಾರು ಹೇಗಿರಬಹುದು ಎಂದೂ ಚಿಂತನೆ ನಡೆಸಿದರು. ಈ ಮಧ್ಯೆ ಕೃಷ್ಣ ಮನೆಯ ಹೊರಗೆ ಗಿಡಗಳೊಂದಿಗೆ ಮಾತನಾಡುತ್ತಿರುವಾಗ ಸಾವಿತ್ರಿ ಬಂದು ಒಂಟಿಯಾಗಿರುವುದೇಕೆ ಎನ್ನುತ್ತಾಳೆ. ಈಗ ಸತ್ತ ಕೃಷ್ಣನ ಮಾತು ಮುಂದುವರಿಯುತ್ತದೆ. ಕೃಷ್ಣನನ್ನು ಕೋಲಾರದ ಬಳಿ ಸಮಾಧಿ ಮಾಡಲು ಕೊಂಡೊಯ್ಯುತ್ತಾರೆ.

ಶಾಲಾ ಶಿಕ್ಷಕರು, ಮಕ್ಕಳು ಬಂದು ಕಾಲು ಮುಟ್ಟಿ ನಮಸ್ಕಾರ ಮಾಡಿ ಹೋಗುತ್ತಾರೆ. ಸಾವಿನ ಮೆರವಣಿಗೆ ನಡೆಯುತ್ತದೆ. ತಮಟೆ ಬಾರಿಸುವವರು ದೇಹದ ಅನತಿ ದೂರದಲ್ಲಿ ಬೆಂಕಿ ಕಾಯಿಸಿಕೊಂಡು ಕುಳಿತುಕೊಳ್ಳುತ್ತಾರೆ. ಸಮಾಧಿಗೆ ಸೇರಿಸುವ ಸಮಯ ಹತ್ತಿರವಾಗುತ್ತಿರುವುದರಿಂದ ಕೃಷ್ಣ ತೇಜಸ್‌ನ ಕಥೆ ಹೇಳುತ್ತಾನೆ. ತೇಜಸ್, ದಮಯಂತಿ ಇಬ್ಬರೂ ಮಕ್ಕಳ ಮದುವೆ ಮಾಡಬೇಕಾಗಿದೆ. ಜಾನ್–ದಮಯಂತಿ, ತೇಜಸ್–ಅದಿತಿ ಮದುವೆ ಮಾಡಲು ದಿನಾಂಕ ನಿಗದಿ ಮಾಡುತ್ತಾರೆ. ಮದುವೆ ಸಮಾರಂಭ ಅದ್ದೂರಿಯಾಗಿ ನಡೆಯುತ್ತದೆ. ಮಕ್ಕಳ ಮದುವೆಯಾದ ಬಳಿಕ ಕೃಷ್ಣ ಸದ್ದಿಲ್ಲದೆ ನಿದ್ದೆಗೆ ಜಾರುತ್ತಾನೆ.



ನೆನಪಿಗೆ ಬರುತ್ತಿಲ್ಲವಲ್ಲ? ಆದರೆ ನನ್ನ ಸಾವಿನ ಅಂತ್ಯ ತಿಳಿದುಕೊಳ್ಳುವ ಕುತೂಹಲ ಮಾತ್ರ ಪತ್ತೇದಾರಿ ಕಾದಂಬರಿಯ ಅಂತ್ಯದಂತೆ ಹಾಗೇ ಉಳಿದುಕೊಂಡಿದೆ.

***

ಅಮೆರಿಕಾ ಸೇರಿಕೊಂಡ ದಮಯಂತಿ ಮತ್ತು ತೇಜಸ್ ಆಗಾಗ ಪತ್ರಗಳನ್ನು ಬರೆಯುವುದು ಮತ್ತು ಫೋನ್‌ನಲ್ಲಿ ಮಾತನಾಡುವುದು ನಡೆಯುತ್ತಲೇ ಇತ್ತು. ಬರುಬರುತ್ತಾ ಅವರಿಗೆ ಬಿಡುವಿಲ್ಲದೆ ಮಾತನಾಡುವುದು ಕಡಿಮೆಯಾಗುತ್ತಾ ಹೋಗುತ್ತಿತ್ತು. ನನಗೆ ನಿವೃತ್ತಿಯಾಗುವ ಕಾಲ ಹತ್ತಿರವಾಗುತ್ತಿದ್ದು ಹಳ್ಳಿಯಲ್ಲಿ ಒಂದು ಸಣ್ಣ ಫಾರ್ಮ್‌ಹೌಸ್ ಮಾಡಿಕೊಳ್ಳಬೇಕು ಎನ್ನುವ ಆಸೆ ಮೊದಲಿಂದಲೂ ಇತ್ತು. ಒಂದು ದಿನ ಹಳ್ಳಿಗೆ ಹೋಗಿ ತಮ್ಮನಿಗೆ ಎರಡೆಕರೆ ಜಮೀನು ಕೊಡುವಂತೆ ಕೇಳಿದೆ. `ಅಯ್ಯೋ ಅಣ್ಣ ನೀವು ನನಗ್ಯಾಕ ಕೇಳ್ತೀರಿ ಎಲ್ಲವೂ ನಿಮ್ಮದೆ. ಯಾವ ಜಮೀನು ಬೇಕೊ ಅದನ್ನ ತೆಗೆದುಕೊಳ್ಳಿ. ಏನಾದರು ಸಹಾಯ ಬೇಕಾದರೆ ಹೇಳಿ ಮಾಡಿಕೊಡ್ತೀನಿ' ಎಂದ. ನನ್ನ ಅಜ್ಜ, ನನ್ನ ತಂದೆ ಮಾಡಿಟ್ಟಿದ್ದ ಜಮೀನಿನ ಎಲ್ಲ ಸ್ಥಳಗಳನ್ನು ನನ್ನ ತಮ್ಮನ ಜೊತೆ ಸುತ್ತಿ ನೋಡಿದ ಮೇಲೆ ನನಗೆ ಇಷ್ಟವಾದ ಒಂದು ಕಡೆ, `ಇಲ್ಲಿ ಎರಡು ಎಕರೆ ತೆಗೆದುಕೊಳ್ಳುತ್ತೇನೆ. ಬೇಕಾದರೆ ಪಕ್ಕದಲ್ಲಿ ನಿನಗೂ ಅದೇ ರೀತಿ ಫಾರ್ಮ್‌ಹೌಸ್ ಮಾಡಿಕೊಡುತ್ತೇನೆ' ಎಂದೆ. `ಆಯಿತು' ಎಂದ. ಒಟ್ಟು ನಾಲ್ಕು ಎಕರೆ ಜಮೀನಿನಲ್ಲಿ ಮಧ್ಯೆ ಯಾವುದೇ ಬೇಲಿ ಇಲ್ಲದೆ ನಾನೇ ಹಣ ಹೂಡಿ ಫಾರ್ಮ್‌ಹೌಸ್ ಮಾಡಲು ಪ್ರಾರಂಭಿಸಿದೆ.

***

ಈ ನಡುವೆ ನಾಲ್ಕಾರು ವರ್ಷಗಳು ಉರುಳಿ ಹೋಗಿದ್ದವು. ನಾನು, ಸಾವಿತ್ರಿ ಅಮೆರಿಕಾಗೆ ಹೋಗಿ ತೇಜಸ್ ಮತ್ತು ದಮಯಂತಿಯನ್ನು ನೋಡಿ ಬಂದಿದ್ದೆವು. ಅಮೆರಿಕಾ ನೋಡಿ ಬಂದ ಮೇಲೆ ನನಗೆ ನಮ್ಮ ದೇಶದ ಸ್ಥಿತಿ ಏಕೆ ಇಷ್ಟು ಕೆಟ್ಟದಾಗಿದೆ ಎಂದು ಊಹಿಸಿಕೊಳ್ಳಲೂ ಸಹ ಸಾಧ್ಯವಾಗಲಿಲ್ಲ. ಅಮೆರಿಕಾ ಇದನ್ನೆಲ್ಲ ಸಾಧಿಸಿರುವುದು ಕೇವಲ ಎರಡು ಶತಮಾನಗಳಿಂದ. ನಮ್ಮ ದೇಶವನ್ನು ಸತ್ಯ ಹರಿಚಂದ್ರ, ಶ್ರೀರಾಮಚಂದ್ರ, ಶ್ರೀಕೃಷ್ಣ ಎಲ್ಲರೂ ಆಳಿದ್ದಾರೆ. ವೇದ ಉಪನಿಷತ್ತುಗಳು ಇಲ್ಲೇ ಹುಟ್ಟಿದ್ದು. ಇಲ್ಲೆ ರಾಮಾಯಣ, ಮಹಾಭಾರತ ಭಗವದ್ಗೀತೆ ಗ್ರಂಥಗಳ ಮೂಲಕ ನಮಗೆ ನ್ಯಾಯ ನೀತಿ ಎಲ್ಲವನ್ನು ತಿಳಿಸಿಕೊಟ್ಟಿದ್ದಾರೆ ಎನ್ನುತ್ತಾರೆ. ಇನ್ನೂ ಅವುಗಳನ್ನೇ ಜನರ ತಲೆಗೆ ಹಾಕಿ ಉಜ್ಜುತ್ತಿದ್ದಾರೆ. ಇನ್ನು ಪುರಾಣಗಳಿಗೆ ಲೆಕ್ಕವಿಲ್ಲ. ಹಿಂದೂ, ಜೈನ, ಬೌದ್ಧ ಧರ್ಮಗಳು ಇಲ್ಲೆ ಹುಟ್ಟಿದ್ದು. ರಾಜ ಮಹಾರಾಜರಿಗಳಿಗಂತೂ ಲೆಕ್ಕವೇ ಇಲ್ಲ. ನಮ್ಮ ಚರಿತ್ರೆ ನಾಗರಿಕತೆ ತೊಟ್ಟಿಲುಗಳು ಪ್ರಪಂಚದಲ್ಲಿಯೇ ಪುರಾತನವಾದವು ಮತ್ತು ಅತ್ಯುನ್ನತವಾದವು ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ನಾವು ಎಡವಿದ್ದು ಎಲ್ಲಿ? ಈಗಲೂ ಪ್ರಪಂಚವೆಲ್ಲ ನೋಡಿ ನಗುವ ರೀತಿಯಲ್ಲಿ ಇರುವುದಾದರು ಯಾತಕ್ಕೆ? ಯಾರು ಕಾರಣ?

ಅಮೆರಿಕಾ ದೇಶವನ್ನು ನೋಡಿದ ಮೇಲೆ ನಮ್ಮ ಜನರು ಅಲ್ಲಿಗೋದರೆ ಮತ್ತೆ ಏಕೆ ಹಿಂದಿರುಗಿ ಬರುವುದಿಲ್ಲ ಎಂದು ಈಗ ತಿಳಿಯಿತು. ಅಮೆರಿಕಾ ಒಂದು ಕಡೆಗಿರಲಿ. ಯೂರೋಪ್ ದೇಶಗಳೂ ಒಂದು ಕಡೆಗಿರಲಿ. ಕೇವಲ ನಲವತ್ತು ವರ್ಷಗಳ ಹಿಂದೆ ತೀರಾ ಬಡತನದಲ್ಲಿ ನರಳುತ್ತಿದ್ದ ಚೀನಾ ದೇಶ ಈಗ ಹೇಗಿದೆ? ಪೂರ್ವದಲ್ಲಿ ಅದೇ ರೀತಿ ಇದ್ದ ಸಣ್ಣ ಸಣ್ಣ ದ್ವೀಪ ದೇಶಗಳಾದ ಥಾಯ್ಲಂಡ್, ಹಾಂಗ್‌ಕಾಂಗ್, ಮಲೇಷ್ಯಾ, ಸಿಂಗಾಪುರಗಳು ಹೇಗಿವೆ? ವಿಶಾಲ ಭರತ ಖಂಡ ಎನ್ನುವ ದೇಶ ಹೇಗಿದೆ?

***

ನಾನು ನಿವೃತ್ತಿಯಾಗುವ ವಿಷಯವನ್ನು ತೇಜಸ್ ಮತ್ತು ದಮಯಂತಿಗೆ ತಿಳಿಸಿದೆ. ಇಬ್ಬರೂ ಎಷ್ಟು ಹಣ ಬರುತ್ತದೆ ಎಂದು ಕೇಳಿದರು, ತಿಳಿಸಿದೆ. ನಿಮಗೆ ಸಾಕಷ್ಟು ಪೆನ್ಷನ್ ಬರುತ್ತದೆ. ಬೆಂಗಳೂರಿನಲ್ಲಿ ನಿಮಗೆ ಮನೆ ಇರುವುದರಿಂದ ತೊಂದರೆ ಏನೂ ಇಲ್ಲ. ಬರುವ ಪೆನ್ಷನ್ ಹಣದಲ್ಲಿ ಸ್ವಲ್ಪ ಹಣ ಇಟ್ಟುಕೊಂಡು ಉಳಿದಿದ್ದನ್ನು ನಮ್ಮಿಬ್ಬರಿಗೂ ಕೊಟ್ಟುಬಿಡಿ ಎಂದರು. ನನಗೆ ಸ್ವಲ್ಪ ಆಘಾತವಾಗಿ ಇವರು ನನ್ನನ್ನು ತಮಾಷೆ ಮಾಡುತ್ತಿದ್ದಾರೊ? ಇಲ್ಲ ನಿಜವಾಗಿ ಕೇಳುತ್ತಿದ್ದಾರೊ ತಿಳಿಯದೆ ಸ್ವಲ್ಪ ಗಾಬರಿಯಾದೆ. ಆದರೂ ಯಾಕೊ ಏನೊ ಎಡವಟ್ಟಾಗಲಿದೆ ಎಂಬುದನ್ನು ನನ್ನ ಆರನೇ ಇಂದ್ರಿಯ ಹೇಳತೊಡಗಿತು. ಸಾವಿತ್ರಿಗೆ, ತೇಜಸ್ ಮತ್ತು ದಮಯಂತಿ ಹೇಳಿದ ಮಾತುಗಳನ್ನು ಹೇಳಿದೆ. ಸಾವಿತ್ರಿ, ಹಣ ಮತ್ತು ಆಸ್ತಿಯ ಬಗ್ಗೆ ಯಾವಾಗಲೂ ತಲೆ ಕೆಡಿಸಿಕೊಳ್ಳದ ಕಾರಣ ಅವಳು `ಅವರಿಗ್ಯಾಕಂತೆ ದುಡ್ಡು?' ಎಂದ ಆಕೆ ಮತ್ತೆ `ನಮಗೂ ಅಷ್ಟು ಹಣ ಯಾತಕ್ಕೆ ಬೇಕು?' ಎಂದಳು.

ತೇಜಸ್ ಒಂದು ದಿನ ಫೋನ್ ಮಾಡಿ `ಡ್ಯಾಡ್ ನಾನು ಇಲ್ಲಿ ಮನೆ ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡ್ತಾ ಇದ್ದೀನಿ. ಆದಷ್ಟು **loan**ಗೆ **apply** ಮಾಡಿದ್ದೀನಿ. ಅದು ಸಾಕಾಗಲಿಲ್ಲ ಅಂದರೆ ನೀವು ಸ್ವಲ್ಪ ಹಣ ಸಹಾಯ ಮಾಡಬೇಕಾಗುತ್ತೆ' ಎಂದ. ಮುಂದಿನ ದಿನ ಫೋನ್ ಮಾಡಿದ ದಮಯಂತಿ,